**ದಿನಾಂಕ 29.06.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ**

1. ನಾನು ಬಿ.ಕಾಂ. ಪದವೀಧರೆ. ನನ್ನ ತಂದೆ ಪೂರ್ಣಯ್ಯನವರು ವಿದ್ಯಾವಂತರು ಎಂದರೆ ಸರಿ., ಸಾಕ್ಷಿಯು ಮುಂದುವರೆದು ಅವರು 10 ನೇ ತರಗತಿಯವರೆಗೂ ವ್ಯಾಸಾಂಗ ಮಾಡಿದ್ದಾರೆ. ನನ್ನ ತಂದೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಸರ್ವೆ ನಂ.42/1 2 ಎಕರೆ 9 ಗುಂಟೆ ಇದ್ದು, ಸರ್ವೆ ನಂ. 42/4 4 ಎಕರೆ ಇದ್ದು ಮತ್ತು ಸರ್ವೆ ನಂ. 42/5 ರಲ್ಲಿ 4 ಎಕರೆ ಜಮೀನುಗಳು ಇದೆ.

2. ದಾವಾ ಸ್ವತ್ತು ಪ್ರತಿವಾದಿಗಳಿಗೆ ಜಂಟಿ ಕುಟುಂಬದ ಸ್ವತ್ತುಗಳು ಎಂದರೆ, ಸಾಕ್ಷಿಯು ನಮಗೆ ಮಾರಾಟ ಮಾಡುವ ಮೊದಲು ಸದರಿಯವರು ಅವರ ನಡುವೆ ವಿಭಾಗ ಮಾಡಿಕೊಂಡಿದ್ದು ನಂತರ ನಮಗೆ ಮಾರಾಟ ಮಾಡಿದ್ದರು ಎಂದು ನುಡಿಯುತ್ತಾರೆ. ಮಾರಾಟ ಪೂರ್ವದಲ್ಲಿ ಪ್ರತಿವಾದಿಗಳು ವಿಭಾಗ ಮಾಡಿಕೊಂಡಿರುವುದಕ್ಕೆ ದಾಖಲಾತಿಗಳನ್ನು ನೋಡಿದ್ದೇನೆ, ಹಾಗೂ ಅವುಗಳ ಪೈಕಿ ಕೆಲವೊಂದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಪ್ರತಿವಾದಿಗಳು ಯಾವ ವರ್ಷದಲ್ಲಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ, ಸಾಕ್ಷಿಯು 1999 ರಲ್ಲಿ ಭಾಗ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

3. ಸದರಿ ಭಾಗದಲ್ಲಿ ತಿಪ್ಪೇಸ್ವಾಮಿಯವರಿಗೆ ಮತ್ತು ಅವರ ಅಣ್ಣ-ತಮ್ಮಂದಿರಿಗೆ ಯಾವ ಸ್ವತ್ತು ಹೋಗಿತ್ತು ಎಂದರೆ, ಸಾಕ್ಷಿಯು ತಿಪ್ಪೆಸ್ವಾಮಿಯವರು ಅವರ ಅಣ್ಣತಮ್ಮಂದಿರ ಜೊತೆ ಅಸಲು ದಾವಾ ಸಂಖ್ಯೆ 26/2007 ರಂತೆ ದಾವೆಯನ್ನು ಹಾಕಿ ಅದರಲ್ಲಿ ರಾಜಿಯನ್ನು ಮಾಡಿಕೊಂಡು ಆ ಪೈಕಿ ಆಸ್ತಿಯನ್ನು ಪಡೆದುಕೊಂಡಿದ್ದು ಸದರಿ ಆಸ್ತಿಗಳು, ಸರ್ವೆ ನಂ 42/1, ಸರ್ವೆ ನಂ. 72/1 ರಲ್ಲಿ 1 ಎಕರೆ 30 ಚಿಲ್ಲರೆ ಗುಂಟೆ ಮತ್ತು ಒಂದು ಮನೆ ಮತ್ತು ಅದರ ಪಕ್ಕದಲ್ಲಿರುವ ಜಾಗ ಹೋಗಿದೆ, ಸದರಿಯವರು ನಮಗೆ ನೊಂದಣಿ ಕ್ರಯ ಪತ್ರ ಮಾಡಿಕೊಂಡ ನಂತರ ರಾಜಿ ಮಾಡಿಕೊಂಡಿರುತ್ತಾರೆ ಎಂದು ಮುಂದುವರೆದು ನುಡಿಯುತ್ತಾರೆ.

4. ದಿನಾಂಕ 04.04.2007 ಅಸಲು ದಾವಾ ಸಂಖ್ಯೆ 26/2007 ಸಲ್ಲಿಸಲಾಗಿತ್ತು ಎಂದರೆ ಸರಿ, ಸಾಕ್ಷಿಯು ಮುಂದುವರೆದು ನನ್ನ ತಂದೆಗೆ ಅದಕ್ಕೂ ಮುಂಚೆ ದಿನಾಂಕ 26.02.2007 ರಂದು ಅಗ್ರಿಮೆಂಟ್ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ತಿಪ್ಪೇಸ್ವಾಮಿ ಮತ್ತು ಅವರ ಮಕ್ಕಳು ದಾವಾ ಸ್ವತ್ತನ್ನು ಮಾರಾಟ ಮಾಡಬಾರದೆಂದು ಆದೇವ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 01.06.2007 ರಂದು ಕ್ರಯ ಪತ್ರವನ್ನು ನಾನು ಪ್ರತಿವಾದಿಗಳ ಜೊತೆ ಶಾಮೀಲಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

5. ನಿ.ಪಿ.3 ರಿಂದ 5 ರಂತೆ ದಿನಾಂಕ 24.02.2007 ರಲ್ಲಿ ಅಗ್ರಿಮೆಂಟ್ ಕರಾರು ಆಗಿತ್ತು ಎನ್ನುವುದಕ್ಕೆ ಯಾವುದೇ ನಮೂದು ಇರುವುದಿಲ್ಲ. ನಿ.ಪಿ.3 ರಿಂದ 5 ರಲ್ಲಿ ದಿನಾಂಕ 01.06.2007 ರಂದೆ ಕ್ರಯ ಪತ್ರವನ್ನು ಬರೆದು ಅದೇ ದಿನ ಹಣ ಪಾವತಿ ಮಾಡಿ ಕ್ರಯವನ್ನು ಮಾಡಿಕೊಡುತ್ತಿದ್ದೇವೆ ಎಂದು ಬರೆಯಲಾಗಿದೆ ಎಂದರೆ ಸರಿ. ದಿನಾಂಕ 24.02.2007 ರಲ್ಲಿ ಅಗ್ರಿಮೆಂಟ್ ಆಗಿದ್ದಲ್ಲಿ ನಿ.ಪಿ.3 ರಿಂದ 5 ದಾಖಲಾತಿಗಳಲ್ಲಿ ಕ್ರಯದ ಕರಾರು ಆಗಿರುವ ಬಗ್ಗೆ ನಮೂದು ಮಾಡುತ್ತಿದ್ದರು ಆ ರೀತಿ ನಮೂದು ಇಲ್ಲದೆ ಇರುವ ಕಾರಣ ಯಾವುದೇ ಕ್ರಯದ ಕರಾರು ಆಗಿರಲಿಲ್ಲ ಎಂದರೆ ಸರಿಯಲ್ಲ

6. ದಿನಾಂಕ 04.04.2007 ರಲ್ಲಿ ನ್ಯಾಯಾಲಯದ ಆದೇಶ ಚಾಲ್ತಿಯಲ್ಲಿದ್ದರೂ ಸಹ ನನ್ನ ತಂದೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದ ಕಾರಣ ಸುಳ್ಳು ಕರಾರನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆಯವರು ತಿಪ್ಪೇಸ್ವಾಮಿಯವರ ಜೊತೆ ಶಾಮೀಲಾಗಿ ನಿ.ಪಿ.3 ರಿಂದ 5 ದಾಖಲಾತಿಗಳನ್ನು ಹಾಗೂ ಸುಳ್ಳು ಕರಾರು ಪತ್ರಗಳನ್ನು ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ತಿಪ್ಪೇಸ್ವಾಮಿಯವರಿಗೆ ಸದರಿ ಕೇಸನ್ನು ನಡೆಸಲು ನನ್ನ ತಂದೆಯವರೇ ಹಣ ಕೊಟ್ಟಿದ್ದರು ಎಂದರೆ ಸರಿಯಲ್ಲ.

7. ಕೇಸು ಚಾಲ್ತಿಯಲ್ಲಿದ್ದರೂ ಮತ್ತು ನ್ಯಾಯಾಲಯದ ಆದೇಶವಿದ್ದರೂ ಸಹ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿ ಸ್ವತ್ತನ್ನು ಮಾರಾಟ ಮಾಡಿದ್ದಕ್ಕೆ ಶಿಕ್ಷೆಯಾಗಿದೆ ಎಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ವಿಚಾರ ನನ್ನ ತಂದೆಗೂ ಮತ್ತು ನನಗೂ ಸಹ ಗೊತ್ತಿದೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 26/2007 ರಲ್ಲಿ ದಿನಾಂಕ 01.09.2009 ರಲ್ಲಿ ತಿಪ್ಪೇಸ್ವಾಮಿ

ಮತ್ತು ಉಳಿದ ಪ್ರತಿವಾದಿಗಳು ಸದರಿ ದಾವೆಯಲ್ಲಿ ರಾಜಿ ಮಾಡಿಕೊಂಡಿದ್ದಾರೆ ಎಂದರೆ, ಸಾಕ್ಷಿಯು 2009 ನೇ ಸಾಲಿನಲ್ಲಿ ವಿಚಾರ ಗೊತ್ತಿರಲಿಲ್ಲ ತದನಂತರ ತಿಳಿದು ಬಂದಿರುತ್ತದೆ. ಸದರಿ ಆದೇಶದ ವಿರುದ್ಧ ನಾನಗಲೀ ಮತ್ತು ನನ್ನ ತಂದೆಯಾಗಲೀ ಅಪೀಲು ಸಲ್ಲಿಸಿಲ್ಲ ಎಂದರೆ, ಸಾಕ್ಷಿಯು ಸದರಿ ವಿಚಾರ ನನ್ನ ತಂದೆಗೆ ಗೊತ್ತಿದೆ ನನಗೆ ಗೊತ್ತಿರಲಿಲ್ಲ. ತದನಂತರ ತಿಪ್ಪೇಸ್ವಾಮಿ ಮತ್ತು ಅವರ ಮಕ್ಕಳ ಮೇಲೆ ನನ್ನ ತಂದೆ ಪ್ರೈವೇಟ್ ಕಂಪ್ಲೈಂಟನ್ನು ನನ್ನ ತಂದೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದೂರಿನ ಸಂಖ್ಯೆ ಸಿ.ಸಿ. 2047/2012 ಎಂದರೆ ಸರಿ.

8. ದಿನಾಂಕ 29.09.2001 ರಲ್ಲಿ ತಿಪ್ಪೇಸ್ವಾಮಿಯವರು ಮೃತಪಟ್ಟ ನಂತರ ಅವರ ಮಕ್ಕಳಾದ ರಘು, ಜಿ.ಕೆ.ಅಶೋಕ ಮತ್ತು ಹೆಂಡತಿ ಉಮಾದೇವಿ ಯವರು ಸಿ.ಸಿ. ಪ್ರಕರಣದಲ್ಲಿ ರಾಜಿ ಮಾಡಿಕೊಂಡು ಕ್ರಯ ಪತ್ರವನ್ನು ನಮಗೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಕ್ರಯ ಆಗಿದೆ ಎಂದರೆ ಸರಿ. ಕ್ರಯ ಪತ್ರದ ಸಮಯದಲ್ಲಿ ಅವರು ನನಗೆ ಯಾವುದೇ ಹಣವನ್ನು ಆ ದಿನ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿಯು ಮುಂಚೆಯೇ ಪಡೆದುಕೊಂಡಿದ್ದರಿಂದ ಆ ದಿನ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಸದರಿ ಕ್ರಯ ಪತ್ರದಲ್ಲಿ ಈ ಹಿಂದೆ ಹಣ ಪಡೆದುಕೊಂಡಿರುವ ಕಾರಣ ನಾವು ಈ ದಿನ ಹಣ ಪಡೆದುಕೊಳ್ಳುವುದಿಲ್ಲವೆಂದು ನಮೂದು ಮಾಡಿರುವುದಿಲ್ಲ ಎಂದರೆ, ಸಾಕ್ಷಿಯು ನ್ಯಾಯಾಧೀಶರ ಸಮಕ್ಷಮದಲ್ಲಿ ನಡೆದ ರಾಜೀ ಮಾತುಕತೆಯಂತೆ ಕ್ರಯ ಪತ್ರವನ್ನು ಬರೆಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

9. ನಗದಾಗಿ ಈ ದಿನ ನಾವು ಹಣವನ್ನು ಪಡೆದುಕೊಳ್ಳುತ್ತಿದ್ದೇವೆ ಎಂದು ನಮೂದು ಇರುವ ಕಾರಣದಿಂದಲೇ ಸದರಿ ಕ್ರಯ ಪತ್ರವನ್ನು ನಾವು ಉದ್ದೇಶಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾವು ಉದ್ದೇಶಪೂರ್ವಕವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರದಂತೆ ನನ್ನ ಹೆಸರಿಗೆ ಎಂ.ಆರ್. ಮತ್ತು ಪಹಣಿ ಯಾಗಿದೆ ಎಂದರೆ ಸರಿ. ಸಾಕ್ಷಿಯು ಸದರಿ ಖಾತಾ ಪಹಣಿಯನ್ನು ನೋಡಿ ಗುರುತಿಸಿದ ಕಾರಣ ಅದನ್ನು **ನಿ.ಡಿ.1 ರಿಂದ 5 ಎಂದು ಗುರುತಿಸಲಾಯಿತು.**

10. 4 ರಿಂದ 6 ನೇ ಪ್ರತಿವಾದಿಗಳಿಗೆ ಸಂಬಂಧಿಸಿದಯವರಿಗೆ ಸಂಬಂಧಿಸಿದ ಆಸ್ತಿಯ ಮೇಲೆ ನಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿ. ಆದರೆ ನನ್ನ ತಂದೆ ಹೆಸರಿಗೆ ಆದಂತಹ ಆಸ್ತಿಯ ಮೇಲೆ ನನಗೆ ಹಕ್ಕಿದೆ. ಅಸಲು ದಾವಾ ಸಂಖ್ಯೆ 26/2007 ರಲ್ಲಿ ಪ್ರತಿವಾದಿ 4 ರಿಂದ 6 ಮತ್ತು ಅವರ ತಾಯಿ ಮರಿಯಮ್ಮ ರವರ ಭಾಗಕ್ಕೆ ಬಂದಂತಹ ಆಸ್ತಿಗಳಲ್ಲಿ ತಿಪ್ಪೇಸ್ವಾಮಿ ಮತ್ತು ಅವರ ಮಕ್ಕಳಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸಾಕ್ಷಿಯು ತಿಪ್ಪೇಸ್ವಾಮಿ ಮತ್ತು ಅವರ ಮಕ್ಕಳು ನನ್ನ ತಂದೆಗೆ ನೊಂದಣಿಯಾದ ವಿಚಾರ ಗೊತ್ತಿದ್ದರೂ ಸಹ ನನ್ನ ತಂದೆಗೆ ಮೋಸ ಮಾಡುವ ಉದ್ದೇಶದಿಂದ ರಾಜೀ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ತಿಪ್ಪೇಸ್ವಾಮಿ ಮತ್ತು ಅವರ ಮಕ್ಕಳಿಗೆ ಮೋಸ ಮಾಡುವ ಯಾವುದೇ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. ನಿ.ಪಿ.3 ರಿಂದ 5 ರ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಕೇಸು ಇದ್ದರೂ ಸಹ ಸುಳ್ಳು ಸೃಷ್ಟಿಸಿ ಸುಳ್ಳು ದಾಖಲಾತಿ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**